# ಕನ್ಯಾಕುಮಾರಿಯ ದಡದಲ್ಲಿ

ಈ ಕಡಲು
ಮಾಮೂಲಿ ಕಡಲಿನಂತಿಲ್ಲ
ಯಾವನೋ ಯೋಗಿಯ ಆತ್ಮದಂತಿದೆ.

ಅಲೆಗಳು
ನಿಟ್ಟುಸಿರಂತೆ ತೇಲಿಬಂದು
ಸ್ಪರ್ಶಿಸುತ್ತಿವೆ ದಡದ ಎದೆಯನ್ನು

ಬಂಡೆಗಳು ನೀರಲ್ಲಿ
ಮಿಂದು ಸ್ಫಟಿಕಗಳಾಗಿವೆ.

ದಿವ್ಯ ನಿರ್ಲಿಪ್ತತೆಯ
ಬೆಳಗು ಬೈಗುಗಳು
ಮುಪ್ಪಿರದ ದೇವತೆಗಳಂತೆ
ಇಲ್ಲಿ ಕಂಗೊಳಿಸುತ್ತವೆ.

ತೇಲುವ ನೌಕೆಗಳು
ಸ್ವರ್ಗಕ್ಕೆ ಕೊಂಡೊಯ್ಯುವ
ತೂಗುಮಂಚಗಳು.

ಯಾರೋ ಪುಣ್ಯಾತ್ಮರ
ಹೆಜ್ಜೆಗಳಿಂದ
ಪುನೀತವಾದಂತಿದೆ ಮರಳು.

ಲೋಕದ
ಯಾವ್ಯಾವುದೋ ಮೂಲೆಯಿಂದ
ಬಂದವರು
ಇಲ್ಲಿಂದಲೇ ಭರವಸೆಯ
ಬೀಜಗಳನ್ನು
ತುಂಬಿ ಕೊಂಡೊಯ್ಯುವರು.

● **ಸಂತೋಷ ಚೊಕ್ಕಾಡಿ**



ಡಿ.ಕೆ. ರಮೇಶ್